ಪ್ರೀತ್ ಎಂಬ ಸಮುದ್ರದಂಥ ಹುಡುಗ ಎಂಬುದು ರಾತ್ರಿಯಿಡೀ ಜಾಗರದಲ್ಲಿ ಅರಿವಾಯಿತು' ಎಂದಳು. ಮೈದಾನದ ನಡುವೆ ನಿಂತಿರುವ ತಮ್ಮಿಬ್ಬರನ್ನು ಇಡೀ ಕಾರವಾರವೇ ದಿಟ್ಟಿಸುತ್ತಿದೆ ಎಂದು ಪ್ರೀತಂನಿಗೆ ಭಾಸವಾಯಿತು. 'ನನಗೂ ರಾಶಿ ಖುಶಿಯಾಗ್ತಿದೆ' ಅಂದ. 'ಅದು ನಿನ್ನ ಕಣ್ಣಲ್ಲೇ ಕಾಣ್ತಿದೆ, ಮನಸಿನ ಮಾತನ್ನು ಹೇಳು' ಎಂದು ನಕ್ಕಳು. ಪ್ರೀತಂ ಬೆವರುತ್ತಿದ್ದ. ಸುಮಿ ಅವನ ಜಾವೆಲಿನ್ ಇಸಿದುಕೊಂಡು, 'ಓ ಈಟಿವೀರನೇ, ಅದೋ, ನಾನು ಆ ತುದಿಯಲ್ಲಿ ಕೂತಿರುವೆನು. ಅಲ್ಲಿವರೆಗೂ ನಿನ್ನ ಈ ಆಯುಧವನ್ನು ಎಸೆದು, ನಿನ್ನ ಹೃದಯದಲ್ಲಿ ಮೀಟಿರುವ ಆ ಪ್ರೀತಿಯನ್ನು ನನ್ನ ಚರಣಗಳಿಗೆ ಸಮರ್ಪಿಸು!' ಎಂದಳು. ಪ್ರೀತಂನೂ ತುಸು ನಾಟಕೀಯವಾಗಿ 'ಅಪ್ಪಣೆ ರಾಜಕುಮಾರಿ' ಅಂದ.

ಮೊದಲ ಚಾನ್ಸಿನಲ್ಲಿ ಪ್ರೀತಂ ಸ್ವಲ್ಪ ನರ್ವಸ್ ಆದದ್ದು ನಿಜ. ಗ್ರಿಪ್ ಜಾಗದಲ್ಲಿ ಕೈ ಬೆವರುತ್ತಿತ್ತು. ಜಾವೆಲಿನ್ ಹಿಡಿದು ಎಸೆಯುವ ಲೈನ್‌ವರೆಗಿನ ರನ್–ಅಲ್ಲೂ ದೃಢತೆ ಬರಲಿಲ್ಲ. ಅವನ ಕೋಚ್ ರೊಡ್ರಿಗ್ಸ್ ಸರ್, 'ಫೋಕಸ್ ಕರ್ ರೇ, ಚಡ್ಯಾ' ಎಂದು ಕೊಂಕಣಿಯಲ್ಲಿ ಹುರುಪು ತುಂಬಿದರು. ಎರಡನೇ ಬಾರಿಯ ಪ್ರಯತ್ನ ಚೆನ್ನಾಗಿತ್ತು. ಆದರೆ ಅವನಿಗಿಂತ ಇನ್ನೂ ದೂರ ಎಸೆದವರಿದ್ದರು. ಕೊನೆಯ ಬಾರಿ ಜಾವೆಲಿನ್ ಭದ್ರವಾಗಿ ಹಿಡಿದ. ಕ್ಷಣ ಕಣ್ಣುಮುಚ್ಚಿ ಆಳವಾದ ಉಸಿರೆಳೆದು ದೇಹವನ್ನು ಮನಸ್ಸನ್ನು ತಾದಾತ್ಮ್ಯಗೊಳಿಸಿ ಆತ್ಮವಿಶ್ವಾಸದ ಹೆಜ್ಜೆಯಿಟ್ಟ. ಎದೆಸೆಟೆಸಿ ಭುಜಗಳನ್ನು ನಿರ್ದಿಷ್ಟ ಪಾತಳಿಯಲ್ಲಿಟ್ಟು ಬಿರುಸಾಗಿ ಜಾವೆಲಿನ್ ಎಸೆದ. ಆ ಎಸೆತದ ನಿಖರತೆ, ಜಾವೆಲಿನ್ ಚಿಮ್ಮಿದ ರೀತಿ ನೆರೆದವರಲ್ಲಿ ರೋಮಾಂಚನ ಉಂಟುಮಾಡಿತು. ಅದು ಖಂಡಿತ ದಾಖಲೆ ದೂರ ಕ್ರಮಿಸಲಿದೆ ಎನ್ನುವುದು ಪ್ರೀತಂನಿಗೆ ಪಕ್ಕಾ ಆಗಿತ್ತು. ಅವನ ಎಣಿಕೆಯಂತೆ ಅದು ಸುಮಿ ಕುಳಿತ ಗ್ಯಾಲರಿಯ ಸಾಲಿಗೆ ಸರಿಯಾಗಿಯೇ ಬಿದ್ದಿತ್ತು! ಥ್ರೋವಿಂಗ್ ಆರ್ಕಿನೊಳಗಿಂದ ತನ್ನೆಲ್ಲಾ ಹುನರು, ಸಾಮರ್ಥ್ಯದಿಂದ ಎಸೆದ ಜಾವೆಲಿನ್ ಮಿಂಚಿನಂತೆ ಚಲಿಸಿ, ಸಿಡಿಲಿನಂತೆ ನೆಲಕ್ಕೆ ಎರಗಿದಾಗ ಪ್ರೀತಂನ ಜೀವನದ ಹೆಮ್ಮೆಯ ಕ್ಷಣವೊಂದು ಚಿಮ್ಮಿತ್ತು.

ಆದರೆ ಮರುಕ್ಷಣ ಚಿಕ್ಕ ಆಘಾತವೊಂದು ಅವನಿಗಾಗಿ ಹೊಂಚುಹಾಕಿತ್ತು! ದಾಖಲೆ ದೂರಕ್ಕೆಸೆದ ಹೆಮ್ಮೆಯಲ್ಲಿ ಪ್ರೀತಂನ ಕಣ್ಣುಗಳು ಜಾವೆಲಿನ್ ವೇಗದಲ್ಲೇ ಸುಮಿಯತ್ತ ಧಾವಿಸಿದವು. ಅರೆ! ಯಾವುದೋ ಹುಡುಗನ ಜೊತೆ ಸಂಭಾಷಣೆಯಲ್ಲಿದ್ದಾಳಲ್ಲ, ತಾನು ದಾಖಲೆ ದೂರಕ್ಕೆ ಎಸೆದದ್ದನ್ನು ಅವಳು ನೋಡಿಲ್ಲವೇ ಹಾಗಾದರೆ? ತನ್ನ ಸಾಧನೆಯ ಕ್ಯಾರೇ ಇಲ್ಲದಂತೆ ಅವನ ಜೊತೆ ಏನು ಮಾತು! ಅವನು ಕ್ರಿಕೆಟರ್ ರೋಹಿತ್ ಅಲ್ಲವೇ! ಸುಮಿಯೊಂದಿಗೆ ಅಷ್ಟು ಸನಿಹದಲ್ಲಿರುವುದೇಕೆ? ಅವರಿಬ್ಬರ ಮಾತುಕತೆ ನೋಡಿದರೆ ಬಹಳ ದಿನಗಳ ಪರಿಚಯ ಇದ್ದಂತಿದೆಯಲ್ಲ. ಬರೀ ಪರಿಚಯವೇ? ಅವರು ಆಡುವುದು ನೋಡಿದರೆ ಆತ್ಮೀಯರೂ ಆಗಿರಬಹುದು... ಪ್ರೀತಂನಿಗೆ ಕಡಲ ತೆರೆಗಳು ಮೇಲೆದ್ದು, ಸುರುಳಿಸುರುಳಿಯಾಗಿ ತನ್ನನ್ನು ಒಳಗೆ ಎಳೆದುಕೊಂಡಂತೆ ಅನಿಸಿತು. ಪ್ರಥಮ ಸ್ಥಾನದ ಪೋಡಿಯಮ್ ಮೇಲೆ ನಿಂತು ಗೋಲ್ಡ್ ಮೆಡಲ್ ಸ್ವೀಕರಿಸುವಾಗ ತಾನೇ ಎಸೆದ ಜ್ಯಾವೆಲಿನ್ ತನ್ನೆದೆಗೇ ಬಂದು ಇರಿದಂತೆ ಅನಿಸಿತು. ಅಷ್ಟರಲ್ಲಿ ಕೋಚ್ ರೊಡ್ರಿಗ್ಸ್ ಸರ್ ಕರೆದದ್ದರಿಂದ ಪ್ರೀತಂ ಅತ್ತ ನಡೆದ. ಅಲ್ಲಿಂದಲೂ ಅವನ ಕಣ್ಣುಗಳು ಗ್ಯಾಲರಿ ಕಡೆಗೇ ಇದ್ದವು. ಈಗ ಸುಮಿ ಯಾವುದೋ ಹುಡುಗಿ ಜೊತೆ ನಿಂತಿದ್ದಾಳೆ. ಹೌದು, ಅವಳು ಕಾಮರ್ಸ್ ಕಾಲೇಜಿನ ಸ್ಟೂಡೆಂಟ್ ಜಾಹ್ನವಿ. ಆ ಹುಡುಗಿ ಜೊತೆ ಏನು ಮಾತು? ಯಾಕೋ ತನಗಿಷ್ಟವಿಲ್ಲ ಆ ಹುಡುಗಿ. ಕಾಲೇಜಿನಲ್ಲಿ ಸ್ವಲ್ಪ ಓವರ್ ಎಂದು ಫೇಮಸ್ ಆಗಿರುವ ಆಕೆಯೊಂದಿಗೆ ಯಾವಾಗ ಫ್ರೆಂಡ್‌ಶಿಪ್ ಆಯ್ತು ಸುಮಿಗೆ? ಆಗ ರೋಹಿತ್, ಈಗ ಜಾಹ್ನವಿ... ಏನಿದು ಚಕ್ಕರ್ ನಡೀತಿದೆ?

***

ಹುಡುಗ ಹುಡುಗಿ ಇಬ್ಬರೂ ರಾತ್ರಿಯಿಡೀ ನಿದ್ದೆ ಮಾಡಲಿಲ್ಲ. ಸುಮಿಗೆ ಪ್ರೀತಂ ಎಸೆದ ಜಾವೆಲಿನ್ ತನ್ನ ಪಾದಕ್ಕೆ ಚುಚ್ಚಿದಂತೆ, ಪ್ರೀತಂನಿಗೆ ತಾನೇ ಎಸೆದ ಜಾವಲಿನ್ ಮರಳಿ ತನ್ನೆದೆಗೇ ಇರಿಯುತ್ತಿರುವಂತೆ ಅನಿಸತೊಡಗಿತ್ತು! 'ನೀನಂದ್ರೆ ಇಷ್ಟ' ಅಂದಿದ್ದಳು. ಪೋಕರಿ ಹುಡುಗನೆಂದೇ ಫೇಮಸ್ಸಾಗಿರುವ ರೋಹಿತನ ಜೊತೆಗೆ ಅಷ್ಟು ಕ್ಲೋಸ್ ಆಗಿದ್ದಾಳಲ್ಲ... ಅವನ ಉಸಿರು ಬಿಗಿದು ಬರುತ್ತಿತ್ತು. ಇತ್ತ ಸುಮಿಗೂ ಉಸಿರು ಕಟ್ಟುತ್ತಿತ್ತು. ಕಾಮರ್ಸ್ ಕಾಲೇಜಿನ ಹುಡುಗಿ ಜಾಹ್ನವಿ ಜೊತೆಗೆ ಅಫೇರ್ ಇದ್ದದ್ದನ್ನು ಪ್ರೀತಂ ಹೇಳಲೇ ಇಲ್ಲ, ಎಂದು ಉರಿದು ಬೀಳುತ್ತಿದ್ದಳು. ಈ ಹುಡುಗರ ಸಹವಾಸವೇ ಬೇಡಪ್ಪ ಎಂದು ಅವಳು, ಈ ಹುಡುಗೀರನ್ನ ನಂಬಬಾರದು ಎಂದು ಅವನು!

ಸ್ಪೋರ್ಟ್ಸಿನಲ್ಲಿ ಸಾಧನೆ ಮಾಡಬೇಕಾದರೆ ಏನೆಲ್ಲ ಮಾಡಬಾರದು ಅನ್ನುವ ಕೋಚ್ ರೊಡ್ರಿಗ್ಸ್ ಪಟ್ಟಿಯಲ್ಲಿ 'ಹುಡುಗೀರ ಚಕ್ಕರಲ್ಲಿ ಅಜಿಬಾತ್ ಪಡನಕಾ' ಎಂಬುದೂ ಒಂದಾಗಿತ್ತು. ಕಾರವಾರಕ್ಕೆ ಬರುವ ಮೊದಲು ನೀಲವ್ವ ಸುಮಿಯ ಕೂದಲು ಬಾಚುತ್ತಾ 'ಚಂದಾಗಿ ಓದು ಬರಹ ಕಲ್ತು ಮುಂದೆ ಬಾ ಮಗಳೆ, ಹುಡುಗರ ಸಾವಾಸಕ್ಕೆ ಮಾತ್ರ ಎಂದೂ ಹೋಗಬ್ಯಾಡಾ' ಅಂದಿದ್ದಳು. 'ನಿನ್ನ ಶೈಲತ್ತಿ ಕತಿ ಏನಾಯ್ತು, ನಿಂಗೇ ಗೊತ್ತೈತಿ' ಎಂದೂ ತಿಳಿಸಿ ತಿಳಿಸಿ ಹೇಳಿದ್ದಳು.

ಸಹಜ ಆಕರ್ಷಣೆಗೊಳಗಾದ ಹೊಸ್ತಿಲಿನಲ್ಲೇ ಎಳೆಯ ಜೀವಗಳೆರಡು ಮಾನಸಿಕ ಗುದ್ದಾಟಕ್ಕಿಳಿಯುವಂತಾಯ್ತು. ಈ ಹುಡುಗೀರನ್ನ ನಂಬಲೇಬಾರದು ಎಂದು ಅವನು, ಈ ಹುಡುಗರ ಸಹವಾಸವೇ ಬೇಡ ಎಂದು ಅವಳು ನಿರ್ಧಾರ ಮಾಡಿ ಒಂದು ವಾರವೇ ಆಗಿತ್ತು. ಅವಳು ಬೀಚಿಗೆ ಹೋದರೂ ಕಾಳಿತೀರದತ್ತ ನಡೆಯಲಿಲ್ಲ. ಇವನು ಪಾತಿ ದೋಣಿಯಲ್ಲಿ ಮೀನು ಹಿಡಿಯುವಾಗ ಬೀಚಿನ ದಾರಿಯತ್ತ ನೋಡದಂತೆ ಕಣ್ಣುಗಳನ್ನು ಕಟ್ಟಿಹಾಕಿದ್ದ. ಆದರೆ ಇಬ್ಬರ ಮನಸ್ಸುಗಳಲ್ಲೂ ಪರಸ್ಪರರ ಬಗೆಗಿನ ಯೋಚನೆಗಳು ಮಾತ್ರ ಕ್ಷಣವೂ ಮರೆಯಾಗಲಿಲ್ಲ. ನಿಂತಲ್ಲಿ ಕೂತಲ್ಲಿ ಮಾತಿನಲ್ಲಿ ಮೌನದಲ್ಲಿ ಗಾಳಿಯಲ್ಲಿ ಬೆಳಕಿನಲ್ಲಿ ಅವರೇ, ಬರೀ ಅವರಿಬ್ಬರೇ! ಉಣ್ಣುವಾಗ ತಿನ್ನುವಾಗ ಯಾವುದೋ ಧ್ಯಾನದಲ್ಲಿರುವ ಮಗನನ್ನೇ ಗುಲಾಬಿ ದಿಟ್ಟಿಸುವಳು. ಹೊಂತಗಾರ ಹುಡುಗನ ಮೌನದೊಂದಿಗೆ ಸಂವಾದಿಸುವ ಬಗೆ ತಿಳಿಯದೇ ಅವಳೂ ಸುಮ್ಮನುಳಿದಳು. ಮಾತು ರೂಪಗೊಳ್ಳದ ಇಂಥ ಗಳಿಗೆಯಲ್ಲೇ ಗುಲಾಬಿಗೆ ಗಂಡನ ನೆನಪಾಗುವುದು. ಮನೆಯಲ್ಲಿ ಮೌನ ಹೆಚ್ಚಾದಷ್ಟೂ ಸಮುದ್ರದ ಅಲೆಗಳ ಆರ್ಭಟ ಹೆಚ್ಚಾಗುತ್ತಿತ್ತು. 'ಕಾಲೇಜಲ್ಲಿ ಸರ್ ಬೈದ್ರಾ? ರೊಡ್ರಿಗ್ಸ್ ಮಾಸ್ತರ್ ಏನಾರೂ ಅಂದ್ರಾ? ಮಾರ್ಕು ಕಮ್ಮಿ ಬಿತ್ತಾ? ದೋಸ್ತರ ಸಂತಿಗೆ ಜಗಳಾಯ್ತಾ? ದುಡ್ಡು ಬೇಕಾ?' ಎಂಬಿತ್ಯಾದಿ ತೇಲುವ ಪ್ರಶ್ನೆಗಳನ್ನು ಒತ್ತಾಯದಲ್ಲಿ ತಂದುಕೊಂಡು ಆ ಮೌನವನ್ನು ಅಲುಗಾಡಿಸಲು ಪ್ರಯತ್ನಿಸುವಳು.

ಶೈಲತ್ತೆಗೂ ಏನೋ ಮಿಸ್ ಹೊಡೆಯಲು ಶುರುವಾಗಿತ್ತು. ನಿತ್ಯದ ತುಂಟತನದ, ಜೀವತುಂಬುವ ಮೆಸೇಜುಗಳು ಬಂದ್ ಆಗಿದ್ದವು. 'ಯಾಕ, ನಿನ್ನ ಮತ್ಸ್ಯಗಂಧಿ ಮೆಸೇಜುಗಳು ರಜೆ ಮೇಲಿವೆ ಏನ?' ಎಂದು ಕೆಣಕುವಳು. ಸುಮಿ 'ಮೂಡಿಲ್ಲ ಶೈಲತ್ತೆ' ಎನ್ನುವಳು. ಅಪಾರ್ಥ, ಮೌನ, ವಿರಹಗಳೂ ಪ್ರೇಮದ ಅವಸ್ಥಾಂತರಗಳಲ್ಲಿ ಜರುಗುವ ಸಾಮಾನ್ಯ ಸಂಗತಿಗಳು ಎನ್ನುವುದನ್ನು ಶೈಲತ್ತೆ ತಿಳಿಯದವಳೇನಲ್ಲ. ಇಂಥ ಸಂದರ್ಭದಲ್ಲಿ ತನ್ನ ಉಪದೇಶಕ್ಕಿಂಥ, ಸಂಬಂಧದ ಸೂಕ್ಷ್ಮಗಳು ಸ್ವಾನುಭವದಿಂದ ಮನವರಿಕೆಯಾದರೇ ಒಳಿತು ಎಂದು ತಾನೂ ಮೌನವಾದಳು. ಆದರೂ ಬಾಹ್ಯ ಶಕ್ತಿಗಳು ಪ್ರೇಮವನ್ನು ಕಮರಿಸುವ ತನ್ನ ಕಾಲದವರಿಗೂ, ಪ್ರೇಮಕ್ಕೆ ಸಂಪೂರ್ಣ ಶರಣಾಗದೇ, ಅಹಂನಿಂದ ಒಲವು ಬಿರುಕುಗೊಳಿಸಿಕೊಳ್ಳುವ ಇಂದಿನವರಿಗೂ ಇರುವ ಫರಕನ್ನು ಅರಿತವಳಾಗಿ ದುಗುಡಗೊಳ್ಳುವಳು. ಸುಮಿಯ ಎಳೆಯ ಹೃದಯಕ್ಕೆ ಒಂದಿಷ್ಟು ಹಿತವಾಗಲು ತಾನೊಮ್ಮೆ ಕಾರವಾರಕ್ಕೆ ಹೋಗಿ ಬರಬೇಕು ಎಂದುಕೊಂಡಳು. ಆ ರಾತ್ರಿ 'ಪ್ರೀತಿಯಲ್ಲಿ ಸಂಬಂಧದಲ್ಲಿ ಮನಸ್ತಾಪ, ಗಲತಫೆಮಿ ಆಗೋದು ಸಹಜ. ಪರಸ್ಪರ ಮಾತಿನಿಂದ, ಕೆಲವೊಮ್ಮೆ ಮೌನದಿಂದ ಮನಸ್ಸನ್ನು ನಿರ್ಮಲಗೊಳಿಸಿಕೊಳ್ಳಬೇಕು. ಪ್ರೀತಿಯಂಥ ಪ್ರೀತಿಯನ್ನೂ ಸಹನೆ ಸಮಾಧಾನ ವಿವೇಕದಿಂದ ಸ್ಫುಟಗೊಳಿಸುತ್ತಿರಬೇಕಾಗುತ್ತದೆ, ಮಗಳೇ' ಎಂದಷ್ಟೇ ಮೆಸೇಜು ಬರೆದು ಮಲಗಿದಳು.

ಕಣ್ಣಾರೆ ಕಂಡದ್ದರಲ್ಲಿ ಕಿವಿಯಾರೆ ಕೇಳಿದ್ದರಲ್ಲಿ ಗಲತಫೆಮಿ ಹೇಗೆ ಸಾಧ್ಯ? ಸ್ಪೋರ್ಟ್ಸ್ ಡೇ ದಿನ, ಕಾಮರ್ಸ್ ಕಾಲೇಜಿನ ಆ ಹುಡುಗಿ ಜಾಹ್ನವಿ 'ಐ ಲವ್ ಹಿಮ್ ಸೋ ಮಚ್' ಎಂದಿದ್ದು ಸುಳ್ಳೇ! ಮೊಬೈಲಿನಲ್ಲಿ ಪ್ರೀತಂನ ಅದೆಷ್ಟು ಫೋಟೋಗಳನ್ನು ಸೇವ್ ಮಾಡಿಕೊಂಡಿದ್ದಾಳೆ! ಆದರೂ... ಪ್ರೀತಂ ಕೂಡ ನಿನ್ನನ್ನು ಪ್ರೀತಿಸ್ತಾನಾ ಅಂತ ನಾನ್ಯಾಕೆ ಕೇಳಲಿಲ್ಲ? ಶ್ಶಿ, ಅದು ನನ್ನ ತಲೆಗೇಕೆ ಹೊಳೆಯಲಿಲ್ಲ? ನಾಳೆ ಪ್ರೀತಂನನ್ನೇ ಮೀಟ್ ಮಾಡಿ ಕ್ಲಿಯರ್ ಮಾಡಿಕೊಳ್ಳಲಾ?

ಆ ದಿನ ಟೂರ್ನಮೆಂಟ್ ಮುಗಿಸಿ ಗ್ರೌಂಡಿಂದ ಹೊರಬೀಳುವಾಗ ರೋಹಿತನಿಗೂ ಪ್ರೀತಂನಿಗೂ